ಪಿಡಬ್ಲ್ಯೂ:21

# <u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

## <u>ಸಿ.ಸಿ. ಸಂಖ್ಯೆ: 620/2014</u>

ಸಾಕ್ಷಿಯನ್ನು ದಿಃ **19.06.2025** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು**.**

**<u>ಪಾಟೀಸವಾಲುಃ ಆರೋಪಿ ಪರ ಶ್ರೀ ಪಿ.ಎಲ್.ಕೆ ವಕೀಲರ ಪರವಾಗಿ ಶ್ರೀ ಡಿ.ವಿ.ಎಸ್ ವಕೀಲರಿಂದಃ</u>**

ಚಾಸಾ 1 ರವರು ಯಾವುದೆ ಮುಂದುವರೆದ ಹೇಳಿಕೆಯನ್ನು ನನ್ನ ಮುಂದೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ. 111, 111(ಎ) ಮತ್ತು 112, 112(ಎ) ರ ಮೂಲ ದಾಖಲೆಗಳನ್ನು ತೆಗೆದುಕೊಂಡು ಹೋಗಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ನಿಪಿ. 111 ರ ಚೆಕ್ ಮತ್ತು ನಿಪಿ. 112 ಕಂಪ್ಯೂಟರೈಜ್ಡ್ ಸ್ಟೇಟ್ ಮೆಂಟ್ ಎನ್ನುತ್ತಾರೆ. ಸದರಿ ದಾಖಲೆಗಳ ಬಗ್ಗೆ ಬ್ಯಾಂಕ್ ನಲ್ಲಿ ತನಿಖೆ ಮಾಡಿದ್ದಿರಾ ಎಂದರೆ ನಾವು ಮನವಿ ಮೇರೆಗೆ ಅವುಗಳನ್ನು ಕೊಡಲಾಗಿತ್ತು ಎನ್ನುತ್ತಾರೆ. ನಾನು ಯಾವುದೆ ಸರಿಯಾದ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ಅಮಾನತ್ತು ಪಂಚನಾಮೆ ಮಾಡುವ ಸಮಯಕ್ಕೆ ಪಂಚ ಸಾಕ್ಷಿದಾರರಿಗೆ ನೋಟೀಸು ನೀಡಿರಲಿಲ್ಲ ಅವರನ್ನು ನಾವೇ ಬರಮಾಡಿಕೊಂಡಿದ್ದೆವು. ನಾನು ಸರಿಯಾಗಿ ತನಿಖೆ ಮಾಡದೆ ಇದ್ದರು ಚಾಸಾ 36 ಮತ್ತು 47 ರಿಂದ ಯಾವುದೆ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ಮೇಲೆ ಯಾವುದೆ ಆರೋಪ ಸಾಬೀತಾಗದೆ ಇದ್ದರೂ ಅವರ ಮೇಲೆ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.